International Journal of Kannada Research
www.kannadajournal.com

**ISSN: 2454–5813**
IJKR 2018; 4(2): 81-84
© 2018 IJKR
www.kannadajournal.com
Received: 18-02-2018
Accepted: 19-03-2018

**ಡಾ. ರಾಮಕೃಷ್ಣ ಮರಾಠೆ**
ಬಿ.ಕೆ. ಕಾಲೇಜು, ಬೆಳಗಾವಿ

**ರಾಜೇಂದ್ರ ಕುಮಾರ ಕೆ.**
ಶಾ.ಕ.ಭಾ.ಅ.ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ

**Correspondence**
**ಡಾ. ರಾಮಕೃಷ್ಣ ಮರಾಠೆ**
ಬಿ.ಕೆ. ಕಾಲೇಜು, ಬೆಳಗಾವಿ

# ಚಂಪಾರ ಕೊಡೆಗಳು ನಾಟಕದ ಸ್ವರೂಪ ಹಾಗೂ ವೈಶಿಷ್ಟತೆ

**ಡಾ. ರಾಮಕೃಷ್ಣ ಮರಾಠೆ, ರಾಜೇಂದ್ರ ಕುಮಾರ ಕೆ.**

## ಪ್ರಸ್ತಾವನೆ

ಕನ್ನಡ ಸಾಹಿತ್ಯ ಪರಂಪರೆ ವಿಶಿಷ್ಟವಾದುದ್ದು. ಅದು ಹಳಗನ್ನಡ ಸಾಹಿತ್ಯದಿಂದ ಹಿಡಿದು ಇಂದಿನ ಆಧುನಿಕ ಸಾಹಿತ್ಯದವರೆಗೂ ಹಲವು ಪ್ರಕ್ರಿಯೆಗಳೊಂದಿಗೆ ಗುರುತಿಸಿಕೊಂಡಿದೆ. ಸಾಹಿತ್ಯದ ಪ್ರಕಾರಗಳಾದ ಕಥೆ. ಕಾದಂಬರಿ. ನಾಟಕ. ಹಾಗೂ ಲಲಿತ ಕಲೆಗಳನ್ನು ತನ್ನಲ್ಲಿ ಉಸಿರಾಗಿ ಉಳಿಸಿಕೊಂಡಿದೆ, ಬೆಳಸಿಕೊಂಡಿದೆ. ಅನ್ಯ ಸಾಹಿತ್ಯದ ಪ್ರಭಾವದಿಂದಲೂ ಮತ್ತಷ್ಟು ಪ್ರಖರಗೊಂಡಿದೆ. ಏಕೆಂದರೆ ಸೃಜನಶೀಲ ಬರಹಗಾರರು ಕನ್ನಡ ಸಾಹಿತ್ಯ ನೇಗಿಲನ್ನು ಉಳುಮೆ ಮಾಡುವಾಗ ಆಲೋಚಿಸದ ಚಿಂತನೆಗಳು ಫಲವನ್ನು ಕೊಡುತ್ತಿವೆ.ಆ ಫಲದ ನೆರಳಿನಲ್ಲಿಯೇ ಆಧುನಿಕತೆಯ ಬರವಣಿಗೆಯ ನಾಗಲೋಟ ಸಾಗುತಿದೆ. ನವೋದಯ, ಪ್ರಗತಿಶೀಲ ನವ್ಯ, ದಲಿತ– ಬಂಡಾಯದ ವಿಭಾಗ ಕ್ರಮದಲ್ಲಿ ರಚಿಸಿಕೊಂಡ ಕೃತಿಗಳು, ಆ ದಿನಗಳು ಸಾಂಸ್ಕೃತಿಕ ಚರಿತ್ರೆಯನ್ನು ದಾಖಲಿಸಿವೆ. ಪಾಶ್ಚಿಮಾತ್ಯದ ಚರಿತೆಯ ಪ್ರಭಾವವು ಕನ್ನಡದ ಮೇಲೆ ಪ್ರಭಾವ ಬೀರುತ್ತಲೆಯಿದೆ. ಈ ಹಿನ್ನಲೆಯಿಂದ ಪ್ರಸುತ್ತ ಲೇಖನದಲ್ಲಿ ನವ್ಯದ ಕಾಲ ಘಟಕದಲ್ಲಿ ಉಂಟಾದ ನಾಟಕಗಳ ವೈವಿಧ್ಯತೆಯನ್ನು ಗಮನಿಸಲಾಗುವದು. ಈ ಸಂಧರ್ಭದಲ್ಲಿ ಅಸಂಗತ ನಾಟಕಗಳು ಕನ್ನಡಲೋಕವನ್ನು ಸಂಕೀರ್ಣಗೊಳಿಸಿದ ಪರಿಣಾಮವನ್ನು ಗುರುತಿಸಲಾಗುವದು. ಈ ಹಿನ್ನಲೆಯಲ್ಲಿ ಚಂದ್ರಶೇಖರ ಪಾಟೀಲರ 'ಕೊಡೆಗಳು' ನಾಟಕದ ಸ್ವರೂಪ ಹಾಗೂ ತಾರ್ಕಿಕತೆಯನ್ನು ಚರ್ಚಿಸಲಾಗುವುದು ಈ ಲೇಖನದ ಮೂಲ ಉದ್ದೇಶ.

## ನಾಟಕ ಹಾಗೂ ಅಸಂಗತ ನಾಟಕಗಳ ಪರಿಕಲ್ಪನೆ

### ನಾಟಕ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ನಾಟಕ 'ದೃಶ್ಯಕಾವ್ಯ' ದಶರೂಪಕಗಳಲ್ಲಿ ಒಂದು. ಕಾವ್ಯ ಮೀಮಾಂಸೆ ಹುಟ್ಟಿದ್ದು ಭರತನ ನಾಟ್ಯಶಾಸ್ರದಿಂದಲೇ. ಅರಿಸ್ಟಾಟಲನ "ಪೊಯೆಟಿಕ್ಸ್" ಕೂಡ ಪ್ರಮುಖವಾಗಿ ನಾಟಕವನ್ನು ಕುರಿತದ್ದು. ಇದು ರಂಗ ಭೂಮಿಯ ಪ್ರದರ್ಶನ ಕಲೆ [೧].

ಅನುಕರಣೆಯನ್ನು ಒಳಗೊಂಡ ಯಾವುದೇ ಪ್ರದರ್ಶನವನ್ನು ನಾಟಕ ಎಂದು ವಿಶಾಲ ಅರ್ಥದಲ್ಲಿ ಕರೆಯಬಹುದು. ಗದ್ಯ ಅಥವಾ ಪದ್ಯರೂಪದಲ್ಲಿ ಸಂಭಾಷಣೆಗಳ ಮುಖಾಂತರ ಘಟನೆಗಳನ್ನು ನಿರೂಪಿಸುವ ರಂಗ ಮಂಚದ ಮೇಲೆ ನಟರು ಅಭಿನಯಿಸಲೆಂದು ರಚಿತವಾಗುವ ಯಾವುದೇ ಕೃತಿ ನಾಟಕವಾಗುತ್ತದೆ.[೨]

ಹೀಗೆ ನಾಟಕಗಳು ಮಾನವೀಯ ಸಂಬಂಧಗಳನ್ನು ಹುಡುಕುತ್ತೇವೆ. ಅವನ ಮನುಷ್ಯನ ಆಕಾಂಕ್ಷೆಗಳನ್ನು ಕಾಣಬಯಸುತ್ತೇವೆ. ಒಂದು ನಿರ್ದಿಷ್ಟವಾದ ಉದ್ದೇಶದಿಂದ ನಾಟಕವು ಸಂಭಾಷಣೆ ಮೂಲಕ ಸಹೃದಯನ ಮನಸ್ಸನ್ನು 'ಸೆರೆ' ಹಿಡಿಯುವುದಾಗಿದೆ.

ನಾಟಕವನ್ನು ಇಂಗ್ಲೀಷ್‌ನಲ್ಲಿ ''Drama'' ಎನುತ್ತೇವೆ. ಗ್ರೀಕ್‌ನ Deed ಕ್ರಿಯೆ, ಪ್ರದರ್ಶನ ಎಂಬುದನ್ನು ಸೂಚಿಸುತ್ತದೆ. ಯಾವುದು ಪ್ರದರ್ಶಿಸಲ್ಪಡತ್ತದೆಯೇ ಅವೆಲ್ಲವೂ ನಾಟಕವೆಂದು ಕರೆಯಲ್ಪಡುತ್ತದೆ.[೩]

ನಾಟಕದ ರೀತಿ ಸಿದ್ಧಾಂತಗಳ ಆಯಾ ಕಾಲ ದೇಶಗಳ ಪರಂಪರೆಯಲ್ಲಿ ಬೆಳೆದು ಬಂದಿರುತ್ತವೆ. ಆದರೆ ಜನರ ಜೀವನ ಕ್ರಮದಲ್ಲದ ವ್ಯತ್ಯಾಸ – ಆಲೋಚನೆ ಸಾಂಸ್ಕೃತಿಕ ಪ್ರಾತಿನಿಧಿತ್ವವನ್ನು ನಾಟಕಗಳ ಪ್ರಯೋಗಕ್ಕೊಳಪಡಿಸಿ, ತನ್ನ ತನವನ್ನು ಗುರುತಿಸಿಕೊಳ್ಳದಲ್ಲಿ ಒಂದು ಹೆಜ್ಜೆ ಮುಂದಿದೆ.

**ಅಸಂಗತ ನಾಟಕ**

ಅಸಂಗತ ಪದದ ಅರ್ಥ ಸಂಗತವಲ್ಲದ್ದು. ಅದೊಂದು ಅರ್ಥಹೀನ, ಅಸಂಬದ್ಧ, ಅಪ್ರಾಸಂಗಿಕ, ಸಾಮರಸ್ಯವಿಲ್ಲದ, ಎಂಬ ಅನೇಕಾರ್ಥಗಳನ್ನು ಸೂಚಿಸುತ್ತದೆ. ಅಸಂಗತವನ್ನು ಇಂಗ್ಲೀಷನಲ್ಲಿ 'Absurd' ಎನ್ನುತ್ತೇವೆ. 'Absurd' ಎಂಬುದು ಸಂಗೀತ ಶಾಸ್ತ್ರದಿಂದ ಬಂದಿದ್ದು ಅಪಸ್ವರ ಅಥವಾ ಅಸಾಂಗತ್ಯವನ್ನು ಸೂಚಿಸುತ್ತದೆ. ಗಣಿತ ಶಾಸ್ತ್ರದಲ್ಲಿ ಲೆಕ್ಕ ಮಾಡುವ ವಿಧಾನಗಳಿಗೆ 'Surd' ಎಂದು ಕರೆಯುವುದರಿಂದ 'Absurd' ಎಂಬ ಶಬ್ದಕ್ಕೆ Surd ಗೆ ವಿರುದ್ಧವಾದ 'ಅಸ್ತವ್ಯಸ್ತ' ಎಂಬರ್ಥ ಬರುತ್ತದೆ. ನ್ಯಾಯ ಶಾಸ್ತ್ರೀಯ ದೃಷ್ಟಿಯಿಂದ ನೋಡಿದಾಗ ಅದು 'ತರ್ಕಹೀನ' ಅಥವಾ ಅವಿವೇಕ ಮಾರ್ಗವನ್ನು ಸೂಚಿಸುತ್ತದೆ. ಕಲಾ ಶಾಸ್ತ್ರೀಯ ದೃಷ್ಟಿಯಲ್ಲಿ ಅದು ಅಸಮಂಜಸ ಅಥವಾ 'ಮೇಳವಿಲ್ಲದ್ದನ್ನು' ತೋರಿಸುತ್ತದೆ. ಸಾಮಾನ್ಯವಾಗಿ ಅದಕ್ಕೆ ನಿರರ್ಥಕತೆ, ನಿರುಪಯೋಗಿ, ಹಾಸ್ಯಾಸ್ಪದ ಎಂಬ ನಿಘಂಟಿನ ಅರ್ಥಗಳು ಇವೆ. ಕನ್ನಡದಲ್ಲಿ ಅಸಂಗತ ಎಂಬ ಪದವನ್ನು ಅಧಿಕೃತವಾಗಿ ಮೊದಲು ಬಳಸಿದವರು ಚಂದ್ರಕಾಂತ ಕುಸನೂರ ಎಂದು ಗುರುತಿಸಲಾಗುವುದು. ಈ ಹಿಂದೆಯೇ ಹಿಂದಿ ಮಾರಾಠಿಗಳಲ್ಲಿ ಈ ಶಬ್ದ ಬಳಕೆಗೆ ಬಂದಿತ್ತು. ಅಸಂಗತ ತತ್ವ ಅಸ್ತಿತ್ವದವಾದದ ಅಂಗವಾಗಿ ಮೊದಲೇ ಗುರುತಿಸಲ್ಪಟಿತ್ತಾದರೂ ಅದನ್ನೂ ವ್ಯವಸ್ಥಿತವಾಗಿ ಮೊದಲು ವಿವೇಚಿಸಿದವನು ಆಲ್ಬರ್ಟ್ ಕಾಮ್ಯು ಎಂಬ ಪ್ರೆಂಚ್ ಲೇಖಕ. ತನ್ನ 'ಸಿಸಿಫನ ಪುರಾಣ' (1942) ಎಂಬ ಪ್ರಬಂಧದಲ್ಲಿ ಅವನ ಅಸಂಗತ ತತ್ವದ ಸ್ವರೂಪ ಮತ್ತು ಹಿನ್ನಲೆಯನ್ನು ಸ್ಪಷ್ಟವಾಗಿ ಗುರುತಿಸಿದೆ. ಮಾನವ ಜೀವನ ಉದ್ದೇಶ ರಹಿತವಾಗಿದ್ದು. ಅವನು ಮಾಡುವ ಕಾರ್ಯಗಳೆಲ್ಲವೂ ನಿರರ್ಥಕವಾಗಿ ಕಾಣುವವು. ಏಕೆಂದರೆ ಒಂದು ನಾಟಕಕ್ಕೆ ಆದಿ ಮದ್ಯ ಅಂತ್ಯವೆಂಬ ಸಂವಿಧಾನವಿದೆ. ಅದಾವುದು ಇಲ್ಲಿ ಕಂಡಬರುವದೂ ಇಲ್ಲ. ಅದೊಂದು ಆಟಕ್ಕುಂಟು ಲೆಕ್ಕಕ್ಕೆಯಿಲ್ಲ ಎಂಬ ವದಂತಿಗೆ ಕಾರಣವಾಗುತ್ತದೆ. ಅಸಂಗತ ನಾಟಕಗಳಿಗೆ ನಿರ್ದಿಷ್ಟವಾದ ಉದ್ದೇಶವಿರುವದಿಲ್ಲ ಪಾತ್ರಗಳು ತಮ್ಮನ್ನು ತಾವು ಅರ್ಥವಿಲ್ಲದೇ ಸಮರ್ಥಸಿಕೊಳ್ಳುವ ಚಾಳಿ. ಗಾಳಿ ಬಂದ ಕಡೆ ತೂರಿಕೊಳ್ಳುವಂತಹ ದಾರಿಯಲ್ಲಿ ನಾಟಕದ ಚಲನೆ ಸಾಗುತ್ತಾ ಇರುತ್ತದೆ. ಇದೊಂದು ಸ್ಥಿರವಲ್ಲದ ಹಾಗೆಯೇ ಹಲವು ಪ್ರಶ್ನೆಗಳನ್ನು ಮನದ ಕನ್ನಡಿಯ ಮೇಲೆ ಮೂಡಿಸಿ ಮೆದುಳಿನ ಬುದ್ದಿಗೆ ಗುರಿಯಿಡುವ ತರ್ಕಾತೀತದ ನಾಟಕಗಳಾಗಿವೆ.

ಈ ತರಹದ ಮಾನವನ ಅಸಂಬದ್ಧತೆಯ ರೂಪಗಳು ಕಾಮು, ಬೆಕೆಟ್, ಅದಮೋಲ್, ಅಮೆನೆಸ್ಕೊ ಮತ್ತು ಜಾನಜೆನೆ ನಾಟಕಗಳಲ್ಲಿ ಚಿತ್ರಿತವಾಗಿವೆ. ಕಾರಣ 1914 ಹಾಗೂ 1939ರಲ್ಲಿ ಜರುಗಿದ ಜಗತ್ತಿನ ಎರಡೂ ಮಾಹಾಯುದ್ದಗಳಿಂದಾದ ಪರಿಣಾಮವಾಗಿ ಈ ತರಹ ನಾಟಕಗಳು ರಚನೆಯಾದವು. ಬದಕು ಅರ್ಥಹೀನ, ಸಾವು ಅನಿಶ್ಚಿತತೆಯ ಮಾಪಕ, ಮೌಲ್ಯಗಳ ಕುಸಿತ, ಆಧುನಿಕ ಜಗತ್ತಿನ ಆತಂಕಗಳನ್ನು ಈ ಅಸಂಗತ ನಾಟಕಗಳು ಗುರುತಿಸುತ್ತಿವೆ. ಇವೆಲ್ಲವು ಸಾಗುತ್ತಿರುವಾಗ ಮಾರ್ಟಿನ್ ಎಸ್ಲಿನ್ 1998ರಲ್ಲಿ 'The theatre of the absurd' (ಅಸಂಗತ ರಂಗಭೂಮಿ ) ಎಂದು ಹೆಸರಿಟ್ಟ. ಹೀಗೆ ಪ್ರಾನ್ಸಿನಲ್ಲಿ ಆರಂಭವಾದ ಅಸಂಗತ ಸಾಹಿತ್ಯ ನಂತರ ಯುರೋಪಿನ ಇತರ ದೇಶಗಳಿಗೂ ಅಮೇರಿಕಾಕ್ಕೂ ಹರಡಿತು ಹಾಗೆಯೇ 1960–70ರ ದಶಕದಲ್ಲಿ ಭಾರತೀಯ ಭಾಷೆಗಳಿಗೂ ಆವರಿಸಿತ್ತು. ಗಿರೀಶ ಕಾರ್ನಾಡ, ಕಂಬಾರ, ಚಂಪಾ, ನ. ರತ್ನ, ಲಂಕೇಶ, ತೇಜಸ್ವಿ, ಚದುರಂಗ, ಆರ್ಯ, ಚಂದ್ರಕಾಂತ ಕುಸನೂರ ಮೊದಲಾದವರು ಅಸಂಗತ ನಾಟಕಗಳನ್ನು ರಚಿಸಿದವರಲ್ಲಿ ಪ್ರಮುಖರು.

**ಚಂಪಾರ ಕೊಡುಗೆಗಳು ನಾಟಕದ ಸ್ವರೂಪ ಹಾಗೂ ವೈಶಿಷ್ಟತೆ**

ಚಂದ್ರಶೇಖರ ಪಾಟೀಲರು ತಮ್ಮ ಮೊನಚಾದ ಸಂಭಾಷಣೆಯ ಮೂಲಕ ಓದುಗರನ್ನು ಸೆಳೆಯುವ ಕಲೆಗಾರಿಕೆವುಳ್ಳವರು. ಆರಂಭದಲ್ಲಿ ಅವು ಕಹಿಯಾಗಿದ್ದರೂ ಜೀವನದ ಒಳರ್ಥವನ್ನು ಬೆಳಗುವಂಥವು. ಅದನ್ನು ಕಾವ್ಯದಲ್ಲಿ ಬಳಸಿಕೊಂಡಂತೆ, ನಾಟಕದಲ್ಲು ಅಷ್ಟೇ ವಿಡಂಬನಾತ್ಮಕವಾಗಿ ಉಪಯೋಗಿಸಿದ್ದಾರೆ. ಅವರ ಅಸಂಗತ ನಾಟಕಗಳಲ್ಲೊಂದಾದ ಕೊಡೆಗಳು ಭಾಷೆಯ ಮೂಲಕ ವ್ಯತಿರಿಕ್ತ ಸಂಭಾಷಣೆ ಮೂಲಕ ಮೊನಚಾಗಿವೆ.

ಕೊಡೆಗಳು ಇದೊಂದು ಕನ್ನಡದ ಅಸಂಗತ ನಾಟಕ. 1968ರಲ್ಲಿ ಇದು ಪ್ರಟಕವಾಯಿತು. ಹಾಗೆಯೇ ಪ್ರಯೋಗಗೊಂಡಿತು. 1960–70ರ ದಶಕವು ಕನ್ನಡ ಸಾಹಿತ್ಯದ ನಾಟಕದಲ್ಲಿ ಅಸಂಗತದ ಅಲೆಗಳು ಕಾಣಿಸುತ್ತಲೇ ಇದ್ದವು. ಪಾಶ್ಚಿಮಾತ್ಯದ ಪ್ರಭಾವ ತುಂಬಾ ತಡವಾಗಿ ಕನ್ನಡಕ್ಕೆ ಬಂದಿತ್ತು. ಕೊಡೆಗಳು ಹೆಸರಿಗೆ ತಕ್ಕಂತೆ ಕೊಡೆಗಳೇ ನಾಟಕದ ಆಕರ್ಷಕ ವಸ್ತುಗಳು. ಮನುಷ್ಯನ ಆಸೆಗೆ 'ಕೊಡೆ' ಹಿಡಿದರೆ ಒಂದು ಅರ್ಥ. 'ಕೊಡೆ' ಹಿಡಿಯದಿದ್ದರೆ ಮತ್ತೊಂದು ಅರ್ಥ. ಅದೊಂದು ಸಮ್ಮಿಶ್ರದ ಅರ್ಥ. ನಾಟಕಕಾರರು ಪಾತ್ರಗಳನ್ನು 'ಕ್ಷ' ಹಾಗೂ 'ಯ' ಎಂದು ಗುರುತಿಸುತ್ತಾರೆ. 'ಕ್ಷಯ' ಎಂಬರ್ಥವೇ ನಾಶ ಎಂದು ಸೂಚಿಸುತ್ತದೆ. ಕ್ಷಣಿಕವಾದದ್ದು ಎಂಬರ್ಥವೋ ಅಥವಾ 'ಕ್ಷಯ' ಎಂಬ ರೋಗವೂ ತಿಳಿಯದ್ದು. ಅದಕ್ಕೆ ನಾನು ಅಸಂಗತ ನಾಟಕಗಳ ಸ್ವರೂಪವನ್ನು ಕನ್ನಡಿಯೊಳಗಿನ ಬಿಂಬ ಎಂದು ಗುರುತಿಸಲು ಬಯಸುತ್ತೇನೆ. ಏಕೆಂದರೆ, ಕನ್ನಡಿಯ ಮುಂದೆ ನಿಂತು ಬಲಗೈಯಿಂದ ತಲೆ ಬಾಚಿ ಕೊಳ್ಳತ್ತಿದ್ದರೆ, ಅಥವಾ ಬಲಗೈಯಿಂದ ಊಟ ಮಾಡುತ್ತಿದ್ದರೆ, ಆ ಕನ್ನಡಿಯನ್ನು ಮತ್ತೊಂದು ಕೋನದಿಂದ ನೋಡುತ್ತಿರುವಾಗ ಆ ವ್ಯಕ್ತಿ ಎಡಗೈಯಿಂದ ಬಾಚಿ ಕೊಂಡಂತೆ, ಊಟ ಮಾಡಿದಂತೆ ಕಾಣುವುದು. ಎರಡು ಕೂಡ ಕ್ರಿಯೆಯಲ್ಲಿವೆ. ಆದರೆ ಮತ್ತೋಬ್ಬನು ನೋಡಿದಾಗ 'ವಕ್ರರೇಖೆ' ಉಂಟಾಗಿರುವುದು ಕಾಣತ್ತದೆ.

ಕನ್ನಡಿ ಪ್ರತಿಮೆಯೇ ಬಗ್ಗೆ ಕೊಡೆಗಳು ನಾಟಕದಲ್ಲಿ ಹೀಗೆ ಸಂಭಾಷಣೆ ನಡೆದಿದೆ ಅದು 'ಕ್ಷ' ಹಾಗೂ 'ಯ' ಮಧ್ಯೆ.

ಕ್ಷ : ಒಂದು ಕನ್ನಡಿ ಮುಂದ ?

ಯ : ಅದು ನನಗೂ ಕನ್ನಡಿ ನಿನಗೂ ಕನ್ನಡಿ

ಕ್ಷ : ಅದು ನನಗೂ ಕನ್ನಡಿ ನಿನಗೂ ಕನ್ನಡಿ ಮುಂದ ?

ಯ : ಕನ್ನಡ್ಯಾಗ ಕಾಣೋದೆಲ್ಲಾ ತಿರುವು ಮುರುವು ಹೌದಲ್ಲೋ ?

ಕ್ಷ : ತಿರುವು ಮುರುವು?---------ಅಥೆಂಗೋ ?

ಯ : ಎಡಗಣ್ಣು, ಬಲಗಣ್ಣು, ಎಡಗಿವಿ, ಬಲಗಿವಿ, ಎಡಗೈ, ಬಲಗೈ------

ಕ್ಷ : ಬಲಗಾಲು----- ಎಡಗಾಲು ಮುಂದ?

ಯ : ಹಂಗ-----ನೀ ಕೊಡೀ ಏರಸೋದಿಲ್ಲ------ನಾ ಕೋಡಿ ಇಳಸೋದಿಲ್ಲ-----ನೀಕೋಡಿ ಬಿಚ್ಚೋದಿಲ್ಲ ಮುಂದ?(5)

ಈ ರೀತಿಯ ಸಂಭಾಷಣೆ ಕನ್ನಡಿಯ ಬಗ್ಗೆ ತಮ್ಮ ಆಲೋಚನೆ ತಮ್ಮ ನಿಲುವುಗಳನ್ನು ತೋರ್ಪಡಿಸುತ್ತಾರೆ. ಹೇಗೆಂದರೆ ಕ್ಷ ಎಂಬ ವ್ಯಕ್ತಿ ತನ್ನ ಕೊಡೆಯನ್ನು ಏರಿಸಿರುವುದಿಲ್ಲ ಯ ವ್ಯಕ್ತಿ ತನ್ನ ಕೊಡೆಯನ್ನು ಏರಿಸಿರುತ್ತಾನೆ. ತಮ್ಮ–ತಮ್ಮ ಕೊಡೆಗಳ ಬಗ್ಗೆ ತರ್ಕಿಸುತ್ತಾ ಜೀವನದ ಅಸ್ತಿತ್ವವನ್ನು 'ಹುಡುಗಾಟ'ದ ಮೂಲಕ ಮುಖಾ–ಮುಖಿಯಾಗಿಸುತ್ತಾರೆ. ಅವರ ಸಂಭಾಷಣೆ 'ನೀರಿನ ಮೇಲಿನ ಗುಳ್ಳೆ'ಯಂತೆ ಇದು ಅವರ ಮಾತಿನ ಅಸ್ತಿತ್ವದ ಸಮಯವನ್ನು ಗುರುತಿಸುವಂಥದ್ದು. ಇನ್ನೊಂದು ವಿಶೇಷ ಏನೆಂದರೆ ಕ್ಷ ಅಥವಾ ಯ ಆಡಿದ ಮಾತುಗಳನ್ನೆ ಮತ್ತೆ ಮತ್ತೆ ಅವರೇ ಆಡಿ ನಗುತ್ತಾರೆ ಕುಣಿಯುತ್ತಾರೆ. ಆಡಿದ ಮಾತುಗಳನ್ನೆ ಪುನಃ ಹೇಳುವುದರಿಂದ ಅಸಂಬದ್ದದ ಪುನಾರಾವೃತ್ತಿಯಾಗುತ್ತಲೇ ಇರುತ್ತದೆ. ಇದು ಅಸಂಗತ ನಾಟಕಗಳ ರಚನಾ ತಂತ್ರ, ಬೇಕು

ಎಂತಲೂ ಬೇಡ ಎಂತಲೂ ಅನುಕರಣಾವ್ಯಯ ಅಲೆಗಳು ನಾಟಕದಲ್ಲಿ ಕಾಣುತ್ತವೆ.

ನವ್ಯ ಸಾಹಿತ್ಯದ ಸಂದರ್ಭದಲ್ಲಿ ಒಡಮೂಡಿದ ಈ ಅಸಂಗತ ನಾಟಕಗಳು ಮಾನವನ ಮನೋದೋರಣೆಗಳ ಪ್ರತೀಕ. ವೈಯಕ್ತಿಕ ಭಿನ್ನತೆಗಳೇ ಮಾನವ ಜನಾಂಗದ ಜೀವಾಳ ಅದರಂತೆ ಕೊಡೆಗಳು ನಾಟಕದಲ್ಲಿ ಕಂಡುಬರುವ ಕೆಲವು ಪ್ರಮುಖ ವೈಶಿಷ್ಟತೆಗಳು.

೧) ಕಾಲವೇಳೆ ಅಂದರೆ ಸಮಯ ಎಷ್ಟಾಯಿತು ಎಂದು ಕೇಳುವುದರೊಂದಿಗೆ ನಾಟಕ ಪ್ರಾರಂಭವಾಗಿ ಸಮಯ ಹೇಳುವುದರೊಂದಿಗೆ ಕೊನೆಗೊಳ್ಳುತ್ತದೆ ಅದು ಕೂಡ ಅಸಂಬದ್ಧ ಸಮಯ.

೨) 'ಕ್ಷ' ಮತ್ತು 'ಯ' ಇಬ್ಬರು ತಾಳ-ಮೇಳವಿಲ್ಲದಿದ್ದರೂ ಓದುಗರನ್ನು\ನೋಡುಗರನ್ನು ಆಲೋಚನೆ ಮೂಲಕ ತರ್ಕಿಸುತ್ತಾರೆ. ಏಕೆಂದರೆ 'ಕ್ಷ' ಕೊಡೆ ಮುಚ್ಚಿರುತ್ತಾನೆ 'ಯ' ಕೊಡೆ ಏರಿಸಿರುತ್ತಾನೆ. ತದನಂತರ ತಮ್ಮ ಜಾಗ ಮಾತ್ರ ಬದಲಾಯಿಸಿ ಅವನ ಕೊಡೆಯನ್ನು 'ಯ' ಏರಿಸುತ್ತಾನೆ. ಇವನ ಕೊಡೆಯನ್ನು 'ಕ್ಷ' ಮುಚ್ಚುತ್ತಾನೆ.

೩) 'ಕ್ಷ' 'ಯ' ಇಬ್ಬರು ಹೆಸರು ಬದಲಾಯಿಸಿಕೊಳ್ಳುತ್ತಾರೆ. 'ಕ್ಷ' ಅಲಸಂದಿ ಕಾಯಿ, ಎಂದು 'ಯ' ಹೆಸರುಕಾಯಿ ಎಂದು ಕರೆದುಕೊಳ್ಳುತ್ತಾರೆ. ತನ್ನತನದ ಹುಡುಕಾಟದೊಂದಿಗೆ, ನಮ್ಮತನದ ಹುಡುಕಾಟವನ್ನು ಅನುಭವಿಸುತ್ತೇವೆ.

೪) ಧಾರವಾಡದ ಪ್ರಾದೇಶಿಕ ಭಾಷೆಯ ಸೊಗಡು ನಾಟಕವನ್ನು ಶ್ರೀಮಂತಗೊಳಿಸಿದೆ. 'ಯ'-ಕೊಡೀ ಇಳಿಸಿದ್ರ-ನನಗ ಹಂಗ ಎಮ್ಮೀ ಹಂಗ ಗುಬ್ಬೀ ಹಂಗ ಸುಡಗಾಡಧಂಗ ಸೂರ್ಯನ ಹಂಗ ಬರೇಬತ್ತಲ ಆಧಂಗ ಅನಸ್ತ್ಯತಿ-ಏನ್ರೆಪ ![6]

೫) ಜೀವನದ ಸೌಂದರ್ಯವನ್ನು ಕೊಡೆಗಳು ನಾಟಕದಲ್ಲಿ ಕಾಣುತ್ತೇವೆ. ಕೊಡೆ ಬಿಚ್ಚುವುದು ವೈಶಾಲ್ಯತೆಯ ಸಂಕೇತವಾದರೆ, ಕೊಡೆ"ಕಟ್ಟುವಿಕೆ' ಒಗ್ಗಟ್ಟಿನ ಪ್ರತೀಕವಾಗಿ ಕಾಣಬಹುದು. ಏಕೆಂದರೆ 'ಕ್ಷ' ಮತ್ತು 'ಯ' ಇಬ್ಬರು ತಮ್ಮ ಜಾಗ ಬದಲಾಯಿಸಿ, ಕೊಡೆಗಳಿಗೆ ಸ್ವಾತಂತ್ರಕೊಟ್ಟು ಸಂತೋಷಿಸುವರು. 'ಕ್ಷ' 'ಯ' ನ ಏರಿಸಿದ ಛತ್ರಿಯನ್ನು ಇಳಿಸಿ ಹುರಿ ಸುತ್ತುವನು. 'ಯ-ಕ್ಷ'ನ ಛತ್ರಿಗೆ ಕಟ್ಟಿದ ಹುರಿಯನ್ನು ಬಿಚ್ಚಿ ಏರಿಸುವನು. ಈ ಸಂದರ್ಭದಲ್ಲಿ ಅಸಂಗತ ಪಾತ್ರಗಳು ಬದುಕು ಬಂಗಾರವೆಂಬುದನ್ನು ಸೂಚ್ಯವಾಗಿ ಮಾತಾಡಿಕೊಳ್ಳುತ್ತವೆ.

ಕ್ಷ : ನಿನ್ನ ಕೊಡೀ ಹೂವಿನ ಕೋಲಾಗೇತಿ ನೋಡು. ನಂದು?
ಯ : ನಿನ್ನ ಕೊಡೀ ಮುತ್ತಿನ ಕುಂಚಿಗಿ ಆಗೇತಿ ನೋಡು [7]

ಹೀಗೆ ಅನ್ಯರ ಬಾಳಿನಲ್ಲಿ ಅಸಹಾಯಕತೆ ಉಂಟಾದಾಗ ಅವರಿಗೆ ಸಾಂತ್ವಾನದ ಮಾತುಗಳಾನ್ನಾಡಿ ದೈರ್ಯ ತುಂಬುವಂತೆ, ಬಡತನದ ಜೀವನ ನಮ್ಮದಾಗಿದ್ದರೆ, ಪ್ರೀತಿಯೇ ನಮ್ಮ ಸಂಪತ್ತು ಎಂಬ ದನಿ ನಾಟಕದ ಈ ಎರಡು ಸಾಲುಗಳಲ್ಲಿದೆ.

೬) ಸ್ಥಿರವಾದ ಮನಸುಗಳನ್ನು ಚಲನಶೀಲತೆಯನ್ನಾಗಿ ಮಾಡುವ ಉತ್ಸಾಹ ಕ್ಷ-ಯ ಪಾತ್ರಗಳದ್ದು. ಎಷ್ಟೇ ಅಸಂಗತವಾಗಿ ಮಾತಾಡಿದರೂ ಜೀವನ-ಮನುಷ್ಯನ ಸುತ್ತ ವಿವೇಚನ ಮಾಡುತ್ತವೆ. ಪರಿವರ್ತನೆಗೆ ಹೇಗೆ ಕಾರಣವಾಗಬೇಕು, ನ್ಯೂನತೆಗೆ ದಾರಿ ಹೇಗೆ ಮುಚ್ಚಬೇಕೆಂದು ಈ ಸಂಭಾಷಣೆಯ ಮೂಲಕ ಕಾಣಬಹುದು. ಹಾಗೇ ಭಾಷಾ ಪ್ರಜ್ಞಾ ಕೂಡ ನೋಡಬಹುದು.

ಯ : ನಿನ್ನ ಕೊಡೀ ತಗೋತಿನಿ
ಅದಕ ಹುರಿ ಬಿಗದೀಯಲ್ಲ, ಅದನ್ನ ಬಿಚ್ಚಿ ಒಗೀತೀನಿ
ಪುಸ್ ಪುಸ್ ಗಾಳಿ ಹಾಕಿ ಶಿವನ ಬೆಟ್ಟಿ ಮಾಡುತೀನಿ
ಅರಬೀ ತುಂಬ ತೂತ ಕೊರದು ಮುಗಲ ಕಡಿಗೆ
ನೋಡತೀನಿ ತೂತು ಈಗ ತೂತು ಅಲ್ಲ.
ತೂತು ಈಗ ಚಿಕ್ಕಿ.
ಕ್ಷ :ನಿನ್ನ ಕೊಡೀ ತಗೋತೀನಿ
ಅದಕ ಮಳೇ ಜಡದೀಯಲ್ಲ, ಅದನ್ನ ಕಿತ್ತಿ ಒಗಿತೀನಿ
ಕೊಡೀ ಇಳಿಸಿ, ಹುರೀ ಬಿಗದು ಹೊಳೀಗೆ ಹೋಗತೀನಿ
ನಿಂತ ನೀರಾಗ
ಹರಿಯೋ ಹೊಳ್ಯಾಗ
ಕೊಡೀ ತುದಿ ಆಡ್ಸಿ ಆಡ್ಸಿ ಕವಿತಾ ಬರೀತಿನಿ ದಂಡಿ ಮ್ಯಾಲಿನ ಉಸುಗಿನ್ಯಾಗ
ನಕಾಶ ತಗೀತಿನಿ ಕಾಗೀ ತಗೀತಿನಿ
ಮನೀ ತಗೀತಿನಿ [8]

ಹೀಗೆ 'ಕ್ಷ' 'ಯ' ಜೀವನದಲ್ಲಿ ಆಶಯದ ಬೀಜಗಳನ್ನು ಹುಡುಕುತ್ತಾರೆ. ಅಸಂಗತದ ಮಾದರಿಯಲ್ಲಿ ನಾಟಕ ರೂಪುಗೊಂಡರು ಬದುಕು ಕಟ್ಟಿಕೊಳ್ಳುವಲ್ಲಿ ಪಾತ್ರಗಳ ವಿವೇಚನೆ ನಮ್ಮನ್ನು ಮೂಕರನ್ನಾಗಿಸುತ್ತದೆ.

'ಬತ್ತಲಾಗುವುದೇ ನವ್ಯದ ಕಲ್ಪನೆ. ಏಕಾಕಿತನದಿಂದ ಹೊರಬಂದು ಮನುಷ್ಯ ಮನುಷ್ಯನೊಂದಿಗೆ, ಜೀವಿಗಳೊಂದಿಗೆ ಒಂದಾಗುವ ಕ್ರಿಯೆ' ಎಂದು ಎಸ್.ಶಿವಣ್ಣರವರು ಚಂಪಾರ ಬಗೆಗಿನ ಸಂಶೋಧನಾ ಸಂದರ್ಭದಲ್ಲಿ ಗುರುತಿಸುತ್ತಾರೆ. ಅಡಿಗರು ಭೂಮಿಗೀತದಲ್ಲಿ ಹೇಳಿದ ಹಾಗೆ 'ತೆಗೆದುಕೋ ನೀಕೊಟ್ಟ ಎಲ್ಲ ವಸ್ತ್ರವಿಲಾಸ; ಈ ಕೋಟು, ಈ ಶರಟು, ಈ ಶರಾಯಿ, ಬತ್ತಲಾಗದೆ ಬಯಲು ಸಿಕ್ಕದಿಲ್ಲಿ" ಎಂಬ ಆಶಯ ಈ ನಾಟಕವನ್ನು ಕಾಡಿದಂತೆ. ಸ್ವಾರ್ಥ ಚಿಂತನೆ ಗಮ್ಯವಾದದ್ದು, ನಿಸ್ವಾರ್ಥ ಚಿಂತನೆ ಅಗಮ್ಯವಾದದ್ದು ಎಂಬದು 'ಕ್ಷ'-'ಯ'ರು ಛತ್ರಿಗಳನ್ನು ಕುರಿತು ಬದುಕುವಾಸೆಯ ಇಂಗಿತ ತೋರ್ಪಡಿಸುತ್ತಾರೆ ಜೀವನದಲಿ ಕಳೆದುಕೊಳ್ಳುವುದಕ್ಕಿಂತ ಪಡೆದುಕೊಳ್ಳುವುದೇ ಹೆಚ್ಚೆಂಬ ಭಾವ ನಾಟಕದ ವೈಶಿಷ್ಟತೆ.

ಚಂದ್ರಶೇಖರ್ ಪಾಟೀಲರು ನಾಟಕದಲ್ಲಿ 'ಅಬ್ಸರ್ಡ' ನಾಟಕವೆಂದು ಪದೇ ಪದೇ ಪಾತ್ರಗಳ ಮೂಲಕ ಹೇಳಿಸುವುದು ಅಸಮಂಜಸವಾಗಿ ತೋರುತ್ತದೆ. ಇವರು ನಾಟಕ ರಚಿಸಿದಾಗಿನ ಸಂದರ್ಭ ಹಾಗೂ ಅವರ ಮೇಲೆ ನ.ರತ್ನರ 'ಗೋಡೆ ಬೇಕೆ ಗೋಡೆ' ಅಸಂಗತದ ನಾಟಕ ಪ್ರಭಾವದಿಂದ ಬರೆದದ್ದು. ಆ ಸಂದರ್ಭ ಕನ್ನಡ ನಾಟಕ ಚರಿತೆಯಲ್ಲಿ ಅಸಂಗತ ನಾಟಕವೆಂದು ಓದುಗರಿಗೆ/ನೋಡುಗರಿಗೆ ಉದ್ದೇಶ ಪೂರ್ವಕವಾಗಿ ಹೇಳಿಸಿದಂತೆ ತೋರುವುದು. ಇದರ ಅವಶ್ಯಕತೆ ಇರಲಿಲ್ಲವೆನಿಸುತ್ತದೆ. ಒತ್ತಾಯ ಪೂರ್ವಕವಾಗಿ, ಯಾವುದನ್ನು ಸಹೃದಯರ ಮೇಲೆ ಹೇರುವಂತಿಲ್ಲವೆಂದು ನಾಟಕಕಾರರು ಗ್ರಹಿಸಬೇಕಿತ್ತು.

'ಕೊಡೆಗಳು' ನಾಟಕದ ಪ್ರಯಾಣದಲ್ಲಿ ನನಗೆ ಕುವೆಂಪುರವರು ಬರೆದ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಆರಂಭದ ಸಾಲುಗಳು ನೆನಪಿಗೆ ಬಂದವು.ಇಲ್ಲಿ ಯಾರೂ ಮುಖ್ಯರಲ್ಲ, ಇಲ್ಲಿ ಯಾರೂ ಅಮುಖ್ಯರಲ್ಲ.ಇಲ್ಲಿ ಯಾವುದಕ್ಕೂ ಮೊದಲಿಲ್ಲ, ಯಾವುದಕ್ಕೂ ತುದಿಯಿಲ್ಲ, ಯಾವುದೂ ಎಲ್ಲಿಯೂ ನಿಲ್ಲುವುದು ಇಲ್ಲ, ಕೊನೆ ಮುಟ್ಟುವುದೂ ಇಲ್ಲ. ಎಂಬ ಮಾತುಗಳು ಕಾದಂಬರಿಗೆ ಮಾತ್ರವಲ್ಲ, ಇಂತಹ ಅಸಂಗತ ನಾಟಕಗಳಿಗೂ ಅನ್ವಯವಾಗುವ ಸಾಧ್ಯತೆಗಳಿವೆ.

ಒಟ್ಟಿನಲ್ಲಿ ಕೊಡೆಗಳು ನಾಟಕ ಜೀವನದ ಅಸಂಗತೆಯೇ ನಿಜವಾದ 'ಬದುಕಿನ ಸಾಂಗತ್ಯವೆಂಬುದನ್ನು ತೋರಿಸುತ್ತದೆ. ಹುಚ್ಚನ ಮಾತುಗಳಿಗೂ ಲೋಕ ಕಿವಿಗೊಡಬೇಕಾಗುತ್ತದೆ ಇಲ್ಲವಾದರೆ ನಿಜವಾದ ಹುಚ್ಚರು ನಾವಾಗುತ್ತೇವೆ. ಬದುಕೆಂಬ ಯಾನದಲ್ಲಿ ಬೆಳಕು-ಕತ್ತಲೆಯಂತೆ 'ಕ್ಷ' 'ಯ' ಪಾತ್ರಗಳು ನಮ್ಮೊಂದಿಗೆ ಮಾತನಾದುತ್ತಾ' ಸೃಜನಶೀಲತೆಗೆ ಕಾಯಕಲ್ಪ ನೀಡುತ್ತವೆ.

**ಅಡಿ ಟಿಪ್ಪಣಿಗಳು**

೧. ವಿಮರ್ಶೆಯ ಪರಿಭಾಷೆ, ಓ.ಎಲ್. ನಾಗಭೂಷಣ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು, 2011. ಪುಟ 189
೨. ಅದೇ, ಪುಟ 190
೩. ವಿಮರ್ಶೆಯ ಪರಿಕಲ್ಪನೆಗಳು, ಕೇಶವಶರ್ಮ ಕೆ, ದೇಸಿ ಪುಸ್ತಕ, ಬೆಂಗಳೂರು, 2014, ಪುಟ 258.
೪. ಅಸಂಗತ, ಬಸವರಾಜ ನಾಯ್ಕರ್, ಕ.ಸಾ.ಅ. ಬೆಂಗಳೂರು, 2002 ಪುಟ 02–03
೫. ಹನ್ನೊಂದು ನಾಟಕಗಳು, ಚಂದ್ರಶೇಖರ ಪಾಟೀಲ, ನೆಲಮನೆ ಪ್ರಕಾಶನ, ಮೈಸೂರು, 1999, ಪುಟ 12.
೬. ಅದೇ, ಪುಟ 10
೭. ಅದೇ, ಪುಟ 15
೮. ಅದೇ, ಪುಟ 14

**ಆಧಾರ ಗ್ರಂಥಗಳು**

೧. ಚಂದ್ರಶೇಖರ ಪಾಟೀಲರ ಸಾಹಿತ್ಯ ಸಮಗ್ರ ಅದ್ಯಯನ, ಎಸ್,ಶಿವಣ್ಣ, ಕ.ಸಾ.ಪ. ಬೆಂಗಳೂರು, 2008
೨. ಅಸಂಗತ, ಬಸವರಾಜ ನಾಯ್ಕರ, ಕ.ಸಾ.ಅ. ಬೆಂಗಳೂರು, 2002
೩. ಹನ್ನೊಂದು ನಾಟಕಗಳು, ಚಂದ್ರಶೇಖರ ಪಾಟೀಲ, ನೆಲಮನೆ ಪ್ರಕಾಶನ, ಮೈಸೂರು, 1999,
೪. ಇಲ್ಲಿ ಯಾರೂ ಮುಖ್ಯರಲ್ಲ, ರಹಮತ್ ತರೀಕೆರೆ, ಲಡಾಯಿ ಪ್ರಕಾಶನ ಗದಗ, 2011
೫. ನವ್ಯತೆ, ನರಹಳ್ಳಿ ಬಾಲಸುಬ್ರಹ್ಮಣ್ಯ, ಅಭಿನವ ಪ್ರಕಾಶನ, ಬೆಂಗಳೂರು, 2017
೬. ಬಯಲುರೂಪ, ಸಿ.ಎನ್. ರಾಮಚಂದ್ರನ್, ಸಪ್ನಬುಕ್ ಹೌಸ, ಬೆಂಗಳೂರು, 2013